# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006.

ಸಂಖ್ಯೆ: ಕರಾಮುವಿ/ಅಸಾವಿ/05–11/2018–19 ದಿನಾಂಕ: 01–10–2018

ಗೆ,

. . . . . . . . . . . . . . . . .

. . . . . . . . . . . . . . . . .

. . . . . . . . . . . . . . . . .

. . . . . . . . . . . . . . . . .

**ಮಾನ್ಯರೆ,**

**ವಿಷಯ :** ಪ್ರಖ್ಯಾತ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪ್ರಚಾರಕ್ಕಾಗಿ ವಿ.ವಿ.ಯಿಂದ ಕೈಪಿಡಿ (Brochure) ಮುದ್ರಿಸಿ ನೀಡುವ ಬಗೆಗೆ.

**ಉಲ್ಲೇಖ :** 1. ಸಭಾ ಸೂಚನಾ ಪತ್ರಸಂಖ್ಯೆ: 15–09–2018.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 01–10–2018

* * * * * *

ಪ್ರಖ್ಯಾತ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಉನ್ನತ ಶಿಕ್ಷಣ ಇಲಾಖಾ ವತಿಯಿಂದ ಪ್ರಚಾರಕ್ಕಾಗಿ ನೀಡಿರುವ ಕೌಟಂರ್‌ನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗುಣಮಟ್ಟವನ್ನು ಸಾರ್ವಜನಿಕರಿಗೆ / ವಿದ್ಯಾರ್ಥಿಗಳಿಗೆ ಅರಿವು ಉಂಟು ಮಾಡುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಕೈಪಿಡಿ (Brochure) ಅನ್ನು ಪ್ರಸ್ತುತಪಡಿಸಬೇಕೆಂದು ಉನ್ನತ ಶಿಕ್ಷಣ ಪರಿಷತ್ ತಿಳಿಸಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಸ್ಪೆಷಿಫಿಕೇಷನ್ ಮತ್ತು ಷರತ್ತುಗಳನ್ವಯ ಕೈಪಿಡಿಗಳ ಮುದ್ರಣಕ್ಕೆ ತಗಲುವ ಕನಿಷ್ಠ ದರಗಳನ್ನು ಎಲ್ಲಾ ತೆರಿಗೆಗಳು ಸೇರಿದಂತೆ ದರಪಟ್ಟಿ ನೀಡಲು ಕೋರಿದೆ.

**ಸ್ಪೇಷಿಫಿಕೇಷನ್ / ಷರತ್ತುಗಳು :**

1. 15 X 22 cm ಅಳತೆಯ 4 ಪುಟಗಳ 220 GSM ತೂಕದ ಫಾರಿನ್ ಆರ್ಟ್ ಪೇಪರ್ ಬಳಸಿ ವಿಭಿನ್ನ ಬಣ್ಣಗಳಲ್ಲಿ (Multi colour) 1000 (ಒಂದು ಸಾವಿರ) ಕೈಪಿಡಿ (Brochure) ಗಳನ್ನು ಮುದ್ರಿಸಿ ಸರಬರಾಜು ಮಾಡಬೇಕಾಗಿದೆ.
2. 10 X 28 cm ಅಳತೆಯ 6 ಪುಟಗಳ 130 GSM ತೂಕದ ಫಾರಿನ್ ಆರ್ಟ್ ಪೇಪರ್ ಬಳಸಿ ವಿಭಿನ್ನ ಬಣ್ಣಗಳಲ್ಲಿ (Multi colour) 2000 (ಎರಡು ಸಾವಿರ) ಕೈಪಿಡಿ (Brochure) ಗಳನ್ನು ಮುದ್ರಿಸಿ ಸರಬರಾಜು ಮಾಡಬೇಕಾಗುತ್ತದೆ.
3. ಮೇಲಿನಂತೆ ಎರಡು ರೀತಿಯ ಕೈಪಿಡಿ (Brochure) ಗಳನ್ನು ಪತ್ಯೇಕ ಪ್ರತ್ಯೇಕವಾಗಿ ಮುದ್ರಿಸಿ ಸರಬರಾಜು ಮಾಡಲು ಪ್ರತಿಯೊಂದಕ್ಕೂ ಪ್ರತ್ಯೇಕವಾಗಿ ದರಗಳನ್ನು ಎಲ್ಲಾ ತೆರಿಗೆಗಳು ಸೇರಿದಂತೆ ದರಪಟ್ಟಿ ಸಲ್ಲಿಸತಕ್ಕದ್ದು.

4. ವಿ.ವಿ. ನಿಲಯವೇ ಕೈಪಿಡಿ (Brochure) ಗಳ ಸಾಫ್ಟ್ ಕಾಪಿ (Soft Copy)ಗಳ ಮಾದರಿಯನ್ನು ಸಿದ್ಧಪಡಿಸಿ ನೀಡುತ್ತದೆ. ಅದರಂತೆ ಅಚ್ಚುಕಟ್ಟಾಗಿ ಯಾವುದೇ ವ್ಯತ್ಯಾಸವಿಲ್ಲದಂತೆ ಮುದ್ರಿಸಿ ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡತಕ್ಕದ್ದು.

5. ವಿ.ವಿ. ನಿಲಯ ಸೂಚಿಸಿದ ದಿನಾಂಕದೊಳಗೆ ಮುದ್ರಿಸಿ ಸರಬರಾಜು ಮಾಡಲು ಸಿದ್ಧರಿರಬೇಕು.

6. ಸದರಿ ಉದ್ದೇಶದ ದರಪಟ್ಟಿಯು ಮುಂದಿನ ಒಂದು ವರ್ಷದವರೆಗೆ (365 ದಿನಗಳು) ಚಾಲ್ತಿಯಲ್ಲಿ ಇರುತ್ತದೆ. ಈ ಸಮಯದಲ್ಲಿ ಇನ್ನೊಮ್ಮೆ ಅವಶ್ಯವಿದ್ದರೆ ತಿಳಿಸಿದಷ್ಟು ಪ್ರತಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಡಬೇಕಾಗುತ್ತದೆ.

7. ಮೇಲಿನ ಷರತ್ತುಗಳಿಗೆ ಒಳಪಟ್ಟು ದರಪಟ್ಟಿಯನ್ನು ಮೊಹರುಮಾಡಿ ಸ್ಯಾಂಪಲ್‌ಗಳನ್ನು ದೃಢೀಕರಿಸಿ ದಿನಾಂಕ:. 05.-10.-2018 . . ರೊಳಗೆ **ಕುಲಸಚಿವರು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು-006.** ಇವರ ಹೆಸರಿಗೆ ಖುದ್ದಾಗಿ / ಅಂಚೆ ಮೂಲಕ ಕಳುಹಿಸಿಕೊಡತಕ್ಕದ್ದು.

8. ದರಪಟ್ಟಿ ಲಕೋಟೆಯ ಮೇಲೆ ದಸರ ವಸ್ತು ಪ್ರದರ್ಶನದ ಕೈಪಿಡಿ (Brochure) ಗಳ ಸಂಬಂಧದ ದರಪಟ್ಟಿ ಎಂದು ಮೇಲ್ಬರಹವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

ಆದೇಶದ ಮೇರೆಗೆ,

1/10

ಕುಲಸಚಿವರು

1/10

ಪ್ರತಿಗಳು : –

1. ಮಾನ್ಯ ಕುಲಪತಿಗಳ ವಿಶೇಷಾಧಿಕಾರಿಗಳು, ಕರಾಮುವಿ
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ
3. ಹಣಕಾಸು ಅಧಿಕಾರಿಗಳು, ಕರಾಮುವಿ
4. ಡೀನ್ (ಶೈಕ್ಷಣಿಕ), ಕರಾಮುವಿ
5. ಮಾಹಿತಿ ತಂತ್ರಜ್ಞಾನ ವಿಭಾಗ (ವಿ.ವಿ.ಯ ಅಂತರ್ಜಾಲದಲ್ಲಿ ಪ್ರಕಟಿಸಿ ಪ್ರಚಾರಿಸಲು)
6. ಕಚೇರಿ ಪ್ರತಿ.